**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**

**ಬ್ಯಾಡಗಿ.**

**ಓ.ಎಸ್.ನಂ. 17/2022.**

**ಪಿ ಡಬ್ಲ್ಯೂಃ 1**

**ದಿನಾಂಕಃ 10-11-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 11 ರಿಂದ 13 ನೇ ಪ್ರತಿವಾದಿಯರ ಪರ ಶ್ರೀ ಎಸ್.ಎಫ್.ಡಬ್ಲೂ.**

**ವಕೀಲರಿಂದಃ**

ನಮ್ಮ ಮನೆತನದ ಮೂಲ ಪುರುಷ ಕನ್ನವ್ವ ಎಂದರೆ ಸರಿ. ಸದರಿ ದಾವಾ ಶೆಡ್ಯೂಲ್-ಸಿ ರಲ್ಲಿನ ಅನುಕ್ರಮ ಸಂಖ್ಯೆಃ3 ಮತ್ತು 4 ನೇ ಆಸ್ತಿಗಳು ಕನ್ನವ್ವ ರವರ ಆಸ್ತಿಗಳು ಎಂದರೆ ಸರಿ. ಸದರಿ ಆಸ್ತಿಗಳನ್ನು ಕನ್ನವ್ವರವರು ವಾದಿಯರ ತಂದೆ ಹಾಗೂ 1 ನೇ ಪ್ರತಿವಾದಿಯ ತಂದೆ ಗುಡ್ಡಪ್ಪ ಹಾಗೂ ಶೇಖಪ್ಪರವರಿಗೆ ಬಿಟ್ಟುಕೊಟ್ಟಿದ್ದರು ಎಂದರೆ ಸರಿ. ಸದರಿ ಆಸ್ತಿಗಳಿಂದ ಬಂದ ಆದಾಯದಿಂದ ಶೇಖಪ್ಪರವರು ಬೇರೆ ಬೇರೆ ಕಡೆ ವ್ಯಾಪಾರ ಪ್ರಾರಂಭಿಸಿದ್ದರು ಎಂದರೆ ಸರಿ. 11 ನೇ ಪ್ರತಿವಾದಿಯವರ ಗಂಡ ಗಂಗಾಧರವರು ಶೇಖಪ್ಪರವರ ಮಗ ಎಂದರೆ ಸರಿ. ಸದರಿ ಗಂಗಾಧರವರು ಶೇಖಪ್ಪರವರೊಟ್ಟಿಗೆ ಸೇರಿ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ಸದರಿ ಗಂಗಾಧರವರು ಶೇಖಪ್ಪರವರೊಟ್ಟಿಗೆ ಅವರಷ್ಟೆ ಶ್ರಮ ಪಟ್ಟು ವ್ಯಾಪಾರ ಮುಂದುವರೆಸಿಕೊಂಡು ಬಂದಿದ್ದರು ಎಂದರೆ ಸರಿ. ಹಾಗೂ ಎಪಿಎಂಸಿ ಬ್ಯಾಡಗಿಯಲ್ಲಿ ಸದರಿ ಗಂಗಾಧರವರು ಮೆಸರ್ಸ ಗಂಗಾಧರ ಶೇಖಪ್ಪ ಬಾರ್ಕಿ ಜನರೆನ್ ಮರ್ಚಂಟ್ಸ ಮತ್ತು ಕಮೀಶನ್ ಎಜೆಂಟ್ ಎಂಬ ನಾಮೆದ ಅಂಗಡಿಯನ್ನು ಹೊಂದಿದ್ದರು ಎಂದರೆ ಸರಿ. ಸದರಿ ಶೆಖಪ್ಪರವರಿಗೆ ಹಾಗೂ ಗಂಗಾಧರವರಿಗೆ ಸದರಿ ಅಂಗಡಿಯಿಂದಲೂ ಸಹ ಸಾಕಷ್ಟು ಆದಾಯ ಬರುತ್ತಿತ್ತು ಎಂದರೆ ಸರಿ. ಹಾಗೂ ಸದರಿ ಆದಾಯದಿಂದ ಶೇಖಪ್ಪರವರು

ಬ್ಯಾಡಗಿಯಲ್ಲಿ ಬೇರೆ ಬೇರೆ ಕಡೆ ಆಸ್ತಿ ಖರೀದಿಸಿದ್ದರು ಎಂದರೆ ಸಾಕ್ಷಿ ನನ್ನ ತಂದೆ ಹಾಗೂ ಶೇಖಪ್ಪರವರು ಕೂಡಿ ಇದ್ದ-ಗ ವ್ಯವಸಾಯದ ಆದಾಯದಿಂದ ಮತ್ತು ವ್ಯಾಪಾರದ ಆದಾಯದಿಂದ ಖರೀದಿಸಿದ್ದರು ಎನ್ನುತ್ತಾರೆ.

02. ದಿನಾಂಕಃ 22.12.1985 ರಂದು ಸದರಿ ಗಂಗಾಧರವರ ಮದುವೆ ಬ್ಯಾಡಗಿಯಲ್ಲಿ ಆಗಿರುತ್ತದೆ ಎಂದರೆ ಸರಿ. ಸದರಿ ಗಂಗಾಧರವರ ಮದುವೆ ಶೇಖಪ್ಪರವರೆ ಮಾಡಿಸಿರುತ್ತಾರೆ ಎಂದರೆ ಸರಿ. ಸದರಿ ಗಂಗಾಧರವರಿಗೆ 11 ನೇ ಪ್ರತಿವಾದಿ ಹೆಂಡತಿಯಾಗಿದ್ದು, 12 ಮತ್ತು 13 ನೇ ಪ್ರತಿವಾದಿಯರು ಅವರ ಮಕ್ಕಳು ಎಂದರೆ ಸರಿ. ಸದರಿ ಗಂಗಾಧರವರು ಮೆಣಸಿನಕಾಯಿ ವ್ಯಾಪಾರಕ್ಕಾಗಿ ಬೇರೆ ಬೇರೆ ರಾಜ್ಯಕ್ಕೆ ಹೋಗುತ್ತಿದ್ದರು ಎಂದರೆ ಸರಿ. ಸದರಿ ಗಂಗಾಧರಪ್ಪ ಹೊರ ರಾಜ್ಯಕ್ಕೆ ವ್ಯಾಪಾರದ ನಿಮಿತ್ತ ಹೋದಾಗ ಅಲ್ಲಿ ತೀರಿಕೊಂಡರು ಎಂದರೆ ಸರಿ. ಸದರಿ ಗಂಗಾಧರ ತನ್ನ ಜೀವಿತಾವಧಿಯಲ್ಲಿ ಶೇಖಪ್ಪರವರೊಟ್ಟಿಗೆ ಆತನ ಎಲ್ಲ ಮಕ್ಕಳ ಜೊತೆ ಕೂಡಿ ವಾಸವಾಗಿದ್ದರು ಎಂದರೆ ಸರಿ. ಸದರಿ ಗಂಗಾಧರಪ್ಪ ತೀರಿಕೊಂಡ ನಂತರ 1 ಮತ್ತು 4 ನೇ ಪ್ರತಿವಾದಿಯರು 11 ರಿಂದ 13 ನೇ ಪ್ರತಿವಾದಿಯರನ್ನು ಕಡೆಗಣಿಸಿದರು ಎಂದರೆ ಸರಿ. 1 ನೇ ಪ್ರತಿವಾದಿ ತನ್ನ ತಂದೆಯ ಜೀವಿತಾವಧಿಯಲ್ಲಿ ತನ್ನ ತಂದೆಗೆ ತಪ್ಪು ಬೋಧನೆ ಮಾಡಿ ತನ್ನ ಹೆಸರಿಗೆ ತನಗೆ ಬೇಕಾದ ಆಸ್ತಿಗಳನ್ನು ಹಚ್ಚಿಕೊಂಡಿದ್ದರು ಎಂದರೆ ಸರಿ. 11 ರಿಂದ 13 ನೇಪ್ರತಿವಾದಿಯರು ಶೇಖಪ್ಪರವರ ವಾರಸುದಾರರಾಗಿದ್ದರಿಂದ ಅವರಿಗೂ ಸಹ ದಾವಾ ಆಸ್ತಿಗಳಲ್ಲಿ ಸಮನಾದ ಹಕ್ಕು ಇದೆ ಎಂದರೆ ಸರಿ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).**

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.